ಕಂಡಿದ್ದೆ. ಅವರ 'ರಾಮಾಚಾರಿಯ ನೆನಪುಗಳು' ಕೃತಿ ಮತ್ತು 'ಗೋಕುಲ ನಿರ್ಗಮನ' ಕಾವ್ಯ ನಾಟಕ ನೆನಪಿನಲ್ಲಿದ್ದವು.

'ರಸಿಕ ಕವಿ' ಎಂದು ಪರಿಚಿತರಾಗಿದ್ದ ಪು.ತಿ.ನ., ಬ್ರಿಟಿಷರ ಕಾಲದಲ್ಲಿ 'ಡಿಫೆನ್ಸ್ ಅಕೌಂಟ್ಸ್' ವಿಭಾಗದಲ್ಲಿ ಕೆಲಸ ಮಾಡಿದವರು. ಕೆಲಸದ ಅಚ್ಚುಕಟ್ಟುತನದಿಂದ ಬ್ರಿಟಿಷ್ ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಮಿಲಿಟರಿ ಶಿಸ್ತಿನ ಕಟ್ಟುಪಾಡುಗಳಿಂದ ಇವರಿಗೆ ವಿನಾಯಿತಿ ಇತ್ತು. ದಿನದ ಕೆಲಸ ಮುಗಿದ ನಂತರ ಕಡತಗಳ ಮಧ್ಯೆ ತಲೆ ಹುದುಗಿಸಿಕೊಂಡು ಸಾಹಿತ್ಯಾಧ್ಯಯನ ಮಾಡಲು, ಸಾಹಿತ್ಯ ರಚಿಸಲು ಅವಕಾಶವಿತ್ತು. ಅಲ್ಲಿದ್ದುಕೊಂಡು ಅವರು ಮೇಲುಕೋಟೆ, ಗೊರೂರು, ಹೆಮ್ಮಿಗೆ ಮುಂತಾದ ಕಡೆ ಮತ್ತು ಹೇಮಾವತಿ ತೀರದಲ್ಲಿ ಸಂಚರಿಸಿ ಬರುತ್ತಿದ್ದರು! ಅವರ ಹಲವು ಕೃತಿಗಳು ಹುಟ್ಟಿದ್ದು ಆ ಕಡತಗಳ ನಡುವಿನಿಂದ.

ನಾವು ಅವರ ಮನೆಗೆ ಹೋದಾಗ ಪು.ತಿ.ನ. ವರಾಂಡಾದಲ್ಲಿ ಕೈಯಲ್ಲೊಂದು ಕನ್ನಡಿ ಹಿಡಿದುಕೊಂಡು ಕುಳಿತು ಶೇವಿಂಗ್ ಯಜ್ಞದಲ್ಲಿ ನಿರತರಾಗಿದ್ದರು. ನಮಸ್ಕಾರ, ಪರಿಚಯದ ಮಧ್ಯೆ ಅವರು ಗಡ್ಡ ಸವರಿ ನೋಡಿಕೊಳ್ಳುತ್ತ, ತಮಾಷೆಯಾಗಿ ಮಾತಾಡಿದರು. ಬಾ.ಕಿ.ನ.ರಿಗೆ ಹತ್ತಿರದ ಪರಿಚಯದವರಾಗಿದ್ದ ಕಾರಣ, ಪು.ತಿ.ನ.ರ ಪತ್ನಿಯೂ ನಮ್ಮ ಮಾತುಕತೆಗೆ ಸೇರಿಕೊಂಡರಲ್ಲದೆ ಕಾಫಿ ನೀಡಿ ಉಪಚರಿಸಿದರು.

ಅನಂತರದ್ದು ಅವರ ನಾಮಧಾರಣೆ! ಮತ್ತಷ್ಟು ಏಕಾಗ್ರತೆಯಿಂದ ಪು.ತಿ.ನ. ನಾಮ ಸರಿಯಾಗಿ ಮೂಡಿದೆಯೆ ಎಂದು, ಕನ್ನಡಿಯಲ್ಲಿ ತಮ್ಮ ಮುಖ ನೋಡಿ, ಸರಿಯಾಗಿದೆ ಎಂದು ಮನವರಿಕೆಯಾದ ನಂತರ ನಮ್ಮೊಂದಿಗೆ ಮಾತಿಗೆ ಕುಳಿತರು. ಅವರ ನಾಮಧಾರಣೆಯ ಒಂದು ಫೋಟೊ ತೆಗೆಯಬಹುದಿತ್ತು ಎನ್ನಿಸಿತು ನನಗೆ.

ಹೆಗಲ ಮೇಲೊಂದು ಶಾಲು ಹಾಕಿಕೊಂಡು ಅವರು ಫೋಟೊ ತೆಗೆಸಿಕೊಳ್ಳಲು ತಯಾರಾದರು. ಚೆನ್ನಾಗಿ ಬೆಳಕಿರುವ ಕಡೆ ಅವರನ್ನು ಕುಳ್ಳಿರಿಸಿ ಫೋಟೊ ತೆಗೆದೆ. ಟೋಪಿ ಧರಿಸಿದ ನಂತರ ಮತ್ತೆರಡು ಫೋಟೊ ಕ್ಲಿಕ್ಕಿಸಿದೆ. ಈ ಲೇಖನದೊಂದಿಗೆ ಪ್ರಕಟವಾಗಿರುವ ಕಪ್ಪು ಬಿಳುಪು ಚಿತ್ರವನ್ನು 'ಪುತಿನ ಸಮಗ್ರ ಕವನಗಳು' ಪುಸ್ತಕದ ಮುಖಚಿತ್ರವಾಗಿ ಬಾ.ಕಿ.ನ. ಬಳಸಿಕೊಂಡಿದ್ದರು.

ಹಿಂದಿನ ವರ್ಷ ನಾವು ಮೂವರು ಮಿತ್ರರು ಕತೆಗಾರ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರನ್ನು ಭೇಟಿ ಮಾಡಿದ್ದು ನೆನಪಿಗೆ ಬಂತು. ಅವರ ನೆನಪಿನ ಶಕ್ತಿಯನ್ನು ಕಂಡು ನಾನು ಬೆರಗಾಗಿದ್ದೆ. ನಾವು ಮೂವರು ನಮ್ಮ ನಮ್ಮ ಹೆಸರು ಹೇಳಿಕೊಂಡು ಪರಿಚಯ ಮಾಡಿಕೊಂಡೆವು. ಅನಂತರ ಸುಮಾರು ಹೊತ್ತು ನಮ್ಮ ಮಾತುಕತೆ ಸಾಗಿತು. ನಾವು ಹೊರಟು ನಿಂತಾಗ ಮಾಸ್ತಿಯವರು ಬಾಗಿಲವರೆಗೆ ಬಂದು, ನಮ್ಮ ನಮ್ಮ ಹೆಸರುಗಳನ್ನು ಹೇಳಿ ನಮ್ಮನ್ನು ಬೀಳ್ಕೊಟ್ಟರು! ನಮ್ಮ ಹೆಸರುಗಳನ್ನು ಅಷ್ಟು ಹೊತ್ತು ಅವರು ಹೇಗೆ ನೆನಪಿಟ್ಟುಕೊಂಡಿದ್ದರು, ಯಾರ ಹೆಸರನ್ನು ಅದಲು ಬದಲು ಮಾಡಲಿಲ್ಲವಲ್ಲ ಎಂಬ ಬೆರಗು ನನ್ನದು.

ಪು.ತಿ.ನ.ರೊಂದಿಗೆ ಮಾತಾಡುತ್ತಿದ್ದಾಗ ಮೇಲಿನ ವಿಷಯವನ್ನು ಅವರಿಗೆ ಹೇಳಿದೆ. "ನೀವು ನಮ್ಮ ಪುಟ್ಟಪ್ಪನವರನ್ನು ಭೇಟಿ ಮಾಡಬೇಕು. ಅವರದು ಅಗಾಧ ನೆನಪಿನ ಶಕ್ತಿ!" ಎಂದರು ಅವರು. ಕು.ವೆಂ.ಪು. ಅವರನ್ನು ಉದ್ದೇಶಿಸಿ ಹೇಳಿದ ಮಾತು ಅದು.

ಪ್ರಾಯಶಃ ಆಗ ಸಾಹಿತ್ಯ ಕ್ಷೇತ್ರದಲ್ಲಿ ನೆಲೆಸಿದ್ದ ವಾತಾವರಣದ ಕಾರಣ, ಸಾಮಾನ್ಯವಾಗಿ ಆಗ ಬರೆಯುತ್ತಿದ್ದ ಬ್ರಾಹ್ಮಣ ಕವಿಗಳು ಕು.ವೆಂ.ಪು. ಕುರಿತು ಅಸಹನೆ, ಮತ್ಸರ ತೋರಿಸುತ್ತಾರೆ ಎಂಬ